



# ಝೇಂಕಾರದ ಹಕ್ಕಿಗಳು

ಟ್ರೋಕಿಲಿಡೇ ಕುಟುಂಬಕ್ಕೆ ಸೇರಿರುವ ಝೇಂಕಾರ ಹಕ್ಕಿಗಳದ್ದು ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು!

ಜಗತ್ತಿನ ಅತೀ ಪುಟ್ಟ ಗಾತ್ರದ ಪಕ್ಷಿ ದ ಬೀ ಹಮ್ಮಿಂಗ್ ಬರ್ಡ್ ಝೇಂಕಾರದ ಹಕ್ಕಿಗಳ ಗುಂಪಿಗೇ ಸೇರಿದೆ. ಕೊಕ್ಕಿನಿಂದ ಬಾಲದ ತುದಿಯವರೆಗೆ ಕೇವಲ 5 ಸೆಂ.ಮೀ ಉದ್ದವಿರುವ ಈ ಹಕ್ಕಿ ತೂಕ ಕೇವಲ 1.8 ಗ್ರಾಂ ಮಾತ್ರ! ಝೇಂಕಾರದ ಹಕ್ಕಿಗಳಲ್ಲಿ ದೊಡ್ಡದಾದ ದೈತ್ಯ ಝೇಂಕಾರದ ಗುಂಪಿನ ಕೆಲವು ಹಕ್ಕಿಗಳು 21.5 ಸೆ.ಮೀ ಉದ್ದವಿದ್ದು, 24 ಗ್ರಾಂಗಳಷ್ಟು ತೂಕ ಹೊಂದಿವೆ.

ಈ ಹಕ್ಕಿಗಳ ರೆಕ್ಕೆ ಪುಕ್ಕಗಳ ವರ್ಣವೈವಿಧ್ಯದ ಚಿತ್ತಾರ ಅಸದೃಶವಾದುದು. ವಿವಿಧ ಆಭರಣಗಳ ಬಣ್ಣವನ್ನೆಲ್ಲಾ ಎರಕಹೊಯ್ದು ಸೃಷ್ಟಿಸಿದಂತಿರುವ ಅಪೂರ್ವ ಚೆಲುವಿನ ಈ ಪುಟ್ಟ ಖಗಗಳ ಹೆಸರುಗಳೂ ಕೂಡ ಅನುರೂಪವೇ. ದಿ ಗೋಲ್ಡನ್ ಸ್ಟಾರ್‌ಫ್ರಂಟ್‌ಲೆಟ್ (ಸೀಲೊಜೆನ ಇಯೊಸ್), ದಿ ರೂಬಿ ಥ್ರೋಟೆಡ್ (ಆರ್ಕಿಲೋಕಸ್ ಕಲುಬ್ರಿಸ್), ದಿ ಸ್ವೋರ್ಡ್ ಬಿಲ್ಲಡ್ (ಎನ್ಸಿಫೆರಾ ಎನ್ಸಿಫೆರಾ), ದಿ ಲಿಟ್ಲ್ ವುಡ್ ಸ್ಟಾರ್ (ಕೀಟೋಸೆರ್ಕಸ್ ಬಾಂಬುಸ್),

(8ನೇ ಪುಟ ನೋಡಿ)

ಚಿತ್ರ ಬರಹ:
**ಡಾ. ಸಿದ್ದರಾಜು, ಕೊತ್ತತ್ತಿ**